ಶ್ರೀ ಎಂ.ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ದಿನಾಂಕ:1.3.1998ರಲ್ಲಿ ಇದ್ದಂತೆ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಸೇರಿದಂತೆ ಒಟ್ಟು 1,10,517 ಪ್ರಕರಣಗಳು ಕರ್ನಾಟಕ ಹೈ ಕೋರ್ಟಿನಲ್ಲಿ ಬಾಕಿ ಇರುತ್ತದೆ.

ಜಿಲ್ಲಾವಾರು ವಿವರಗಳನ್ನು ಕರ್ನಾಟಕ ಉಚ್ಚ ನ್ಯಾಯಾಲಯ ನಿರ್ವಹಿಸಿರುವುದಿಲ್ಲ.

ಹರಿಜನ ಕಾಲೋನಿಯ ರಸ್ತೆಯ ಡಾಂಬರೀಕರಣ

791 - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಳ ತಾಲ್ಲೂಕಿನ ಬೆಳ್ಳಾರೆ ಸವಣೂರು ರಸ್ತೆಯ ಬೋರಡಕ ಎಂಬಲ್ಲಿಂದ ಬೋರಿಯಾ ಎಂಬಲ್ಲಿರುವ ಹರಿಜನ ಕಾಲೋನಿಗೆ ಸಂಪರ್ಕ ಕಲ್ಪಿಸುವ ಅಗತ್ಯವಿದ್ದು, ಸುಮಾರು ಎರಡೂವರೆ ಕಿಮೀ. ಉದ್ದ ಇರುವ ರಸ್ತೆಗೆ ಡಾಂಬರೀಕರಣದ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಸುಳ್ಯ ತಾಲ್ಲೂಕಿನ ಬೆಳ್ಳಾರೆ ಸವಣೂರು ರಸ್ತೆಯ ಬೋರಡಕ ಎಂಬಲ್ಲಿಂದ ಬೋರಿಯಾ ಹರಿಜನ ಕಾಲೋನಿಗೆ ಇರುವ ಕಚ್ಚಾ ರಸ್ತೆಯು 2.0 ಕಿಮೀ ಉದ್ದವಿದ್ದು ಇದರ ಸಣ್ಣಪುಟ್ಟ ನಿರ್ವಹಣೆಯನ್ನು ಗ್ರಾಮ ಪಂಚಾಯತ್ ವತಿಯಿಂದ ನಿರ್ವಹಿಸಲಾಗುತ್ತಿದೆ.

ಅದರ ಅಭಿವೃದ್ಧಿಗೆ ಜಲ್ಲಿ ಹಾಕಿ ಡಾಂಬರೀಕರಣ ಒದಗಿಸಿ ಮೋರಿ ರಚನೆಗಾಗಿ 9.00 ಲಕ್ಷ ರೂ.ಗಳ ಅಗತ್ಯವಿದ್ದು, ಅನುದಾನ ಲಭ್ಯತೆಯಂತೆ, ಮುಂದಿನ ವರ್ಷಗಳಲ್ಲಿ ತೆಗೆದುಕೊಳ್ಳಲು ಪರಿಶೀಲಿಸಲಾಗುವುದು.

ಪುತ್ತೂರು ತಾಲ್ಲೂಕಿನ ರಸ್ತೆ ಡಾಂಬರೀಕರಣ

792 - ಶ್ರೀ ಎ.ಆರ್ ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು ತಾಲ್ಲೂಕು ಸವಣೂರದಿಂದ ಪೇರುವಾಜೆವರೆಗೆ ಡಾಂಬರ್ ರೋಡ್ (ರಸ್ತೆ) ಮಾಡುವ ಕೆಲಸದ ಪ್ರಗತಿ ಎಲ್ಲಿಯವರೆಗೆ ಬಂದಿದೆ?

ಆ) ಎರಡು ವರ್ಷದಿಂದ ಹಿಂದೆಯೆ ರೋಡಿಗೆ ಜಲ್ಲಿ ಹಾಕಿದ್ದು ಇನ್ನುವರೆಗೆ ಡಾಂಬರ್ ಹಾಕದೇ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಈ ರಸ್ತೆಯು 10 ಕಿಮೀ. ಉದ್ದವಿದ್ದು, ಮಂಜೂರಾದ 4.0 ಕಿಮೀ. ಉದ್ದಕ್ಕೆ ಗ್ರೇಡ್-1 ಮತ್ತು ಗ್ರೇಡ್-2ರ ಜಲ್ಲಿಯನ್ನು ಹಾಕಲಾಗಿದೆ.

ಆ) ಬಂದಿದೆ. ಇದುವೆರಗೂ 50 ಮೀಟರ್ ಉದ್ದಕ್ಕೆ ಡಾಂಬರೀಕರಣ ಆಗಿದ್ದು, ಉಳಿದ ಭಾಗಕ್ಕೆ 1998-99ನೇ ಸಾಲಿನಲ್ಲಿ ಡಾಂಬರು ಮಾಡಲಾಗುವುದು.

ಸುಳ್ಯ ತಾಲ್ಲೂಕಿನ ಗೌರಿ ಹೊಳೆಗೆ ಸೇತುವೆ ಕಾರ್ಯ

793 - ಶ್ರೀ ವಿ.ಆರ್. ಕೃಷ್ಣಮೂರ್ತಿ (ಸಂತೇಮಾರನಹಳ್ಳಿ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನ ಬೆಳ್ಳಾರೆ ಮದ್ದತ್ತು ಸವಣೂರು ರಸ್ತೆ ಸಂಪರ್ಕಕ್ಕೆ ಗೌರಿ ಹೊಳೆಗೆ ನಿರ್ಮಾಣವಾಗಲಿರುವ ಸೇತುವೆ ಕಾಮಗಾರಿ ಕೆಲಸವು ಸ್ಥಗಿತವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹಿಂದೆ ಸ್ಥಗಿತಗೊಂಡಿದ್ದು, 97-98ನೇ ಸಾಲಿನಲ್ಲಿ ಪುನರಾರಂಭಿಸಲಾಗಿದೆ.

ಆ) ಕೆಲಸ ಪ್ರಗತಿಯಲ್ಲಿದ್ದು 7 ಲಕ್ಷ ರೂ. ಪ್ರಗತಿಯಾಗಿರುತ್ತದೆ.(3-98)

ರಸ್ತೆಗಳ ಗಟಾರು ಕುರಿತು

794 - ಶ್ರೀ ಡಾ|| ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಹೆಚ್ಚಾಗಿ ಗಟಾರುಗಳಿಲ್ಲದೇ ರಸ್ತೆಗಳು ಹಾಳಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ರಸ್ತೆ ಕಾಮಗಾರಿ ಅಂದಾಜು ತಯಾರಿಸುವಾಗ ಗಟಾರವನ್ನು ಸೇರಿಸಲು ಸರ್ಕಾರದವರು ಪರಿಶೀಲಿಸುವರೆ?

ಇ) ಈ ಗಟಾರವನ್ನು ಸುಸ್ಥಿತಿಯಲ್ಲಿಡಲು ಹೆಚ್ಚಿನ ಅನುದಾನವನ್ನು ಕೊಡಮಾಡುವಿರಾ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಗರದ ಮಿತಿಯಲ್ಲಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ರಸ್ತೆ ಕಾಮಗಾರಿ ಅಂದಾಜು ತಯಾರಿಸುವಾಗ, ಗಟಾರಕ್ಕೆ ಬೇಕಾದ ಮಣ್ಣಿನ ಕೆಲಸಕ್ಕೆ ಮಾತ್ರ ಅವಕಾಶ ಮಾಡಲಾಗುತ್ತದೆ.